3. ಮೇಲೆ ತಿಳಿಸಿದಂತೆ ಸಿಬ್ಬಂದಿ ವೆಚ್ಚವು ಒಟ್ಟು ವೆಚ್ಚದ ಶೇಕಡಾ 19.23 ಮಾತ್ರ ಆಗಿರುತ್ತದೆ.

4. ಸಿಬ್ಬಂದಿ ವೆಚ್ಚವು ಒಟ್ಟು ಕಾಡಾ ವೆಚ್ಚದ ಶೇಕಡಾ 19.23 ಆಗಿರುವುದರಿಂದ ಕಾಡಾ ಇಲಾಖೆ ಮುಚ್ಚುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಹದಾಯಿ ಯೋಜನೆಯ ಕಾರ್ಯಗತ.

1231 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) :ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಾ ಸರ್ಕಾರದಿಂದ ಮಲಪ್ರಭಾ ನದಿಗೆ ಮಹದಾಯಿ ಯೋಜನೆಯ ಜೋಡಣೆ ಈಗ ಯಾವ ಹಂತದಲ್ಲಿದೆ?

ಆ) ಗೋವಾ ಸರ್ಕಾರ ಮಹದಾಯಿ ನೀರನ್ನು ಕೊಡಲು ಸಾಧ್ಯವಿಲ್ಲವೆಂದು ಪತ್ರಿಕಾ ಹೇಳಿಕೆ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) 1992ರಿಂದ ಇಲ್ಲಿಯವರೆಗೆ ಸುಮಾರು 6 ಸಲ ಮಾತುಕತೆ ನಡೆಸಿದರೂ ಪ್ರತಿಫಲ ದೊರೆಯದಿರುವುದಕ್ಕೆ ಕಾರಣವೇನು?

ಈ) ಕರ್ನಾಟಕದಲ್ಲಿಯೇ ಹರಿಯುವ ಹಳ್ಳಗಳಾದ ಕಳಸಾ, ಹಲ್ತಾರ ಮುಂತಾದವುಗಳಿಗೆ ಬಾಂದರ ಕಟ್ಟಿ ಮಲಪ್ರಭಾ ನದಿಗೆ 4 ಟಿಎಂಸಿ ನೀರನ್ನು ನಾವೆ ಒದಗಿಸಿಕೊಳ್ಳಲು ಏಕೆ ಯೋಜಿಸಬಾರದು?

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಮಂತ್ರಿಗಳು) :

ಅ) ಗೋವಾ ಸರ್ಕಾರದೊಡನೆ ಮಾತುಕತೆ ನಡೆಯುತ್ತಿದೆ.

ಆ) ಬಂದಿದೆ Yes.

ಇ) ಪ್ರತಿ ಸಭೆಗಳಲ್ಲಿ ಗೋವಾ ಸರ್ಕಾರವು ಪರಿಸರ ಅಸಮತೋಲನದ ಬಗ್ಗೆ ಆಕ್ಷೇಪಣೆ ಎತ್ತಿದ್ದರಿಂದ ಅಂತಿಮವಾಗಿ ಸದರಿ ವಿಷಯವನ್ನು ಅಧ್ಯಯನ ಮಾಡಲು ನೀರಿ, ನಾಗಪುರ ಇವರಿಗೆ ವಹಿಸಿ ಕೊಡಲಾಗಿದ್ದು, ಇವರಿಂದ ಅಂತಿಮ ವರದಿ ಮಾರ್ಚ್ 98ರಲ್ಲಿ ಬಂದಿದೆ. ವರದಿಯನ್ನು ಗೋವಾ ಸರ್ಕಾರಕ್ಕೆ ಕಳುಹಿಸಲಾಗಿದೆ. ದಿನಾಂಕ 25.4.98ರಂದು ನಡೆದ ಎರಡೂ ರಾಜ್ಯಗಳ ನೀರಾವರಿ ಸಚಿವರುಗಳ ಸಭೆಯಲ್ಲಿ ಈ ವರದಿಯನ್ನು ಗೋವಾ ಸರ್ಕಾರ ರಚಿಸಿರುವ ತಜ್ಞರ ಸಮಿತಿಯ ಮುಂದೆ ಮಂಡಿಸಿ 6 ತಿಂಗಳೊಳಗೆ ಸಮಿತಿಯ ವರದಿ ಪಡೆಯಲು ನಿರ್ಧರಿಸಲಾಯಿತು.

ಈ) ಇದನ್ನು ಪರಿಶೀಲಿಸಲಾಗುತ್ತಿದೆ. ಎರಡೂ ರಾಜ್ಯ ಸರ್ಕಾರಗಳು ತಾಂತ್ರಿಕ ಸಮಿತಿ ರಚಿಸಲು ಒಪ್ಪಿದ್ದು ಸಮಿತಿಯು ಇನ್ನು ಮೂರು ತಿಂಗಳೊಳಗಾಗಿ ವರದಿ ಸಲ್ಲಿಸುವುದು.